**ಸಿ.ಸಿ.ನಂ.304/2022**

**ಡಿ.ಡಬ್ಲ್ಯೂ.1**

**<u>ಸಾಕ್ಷಿಗೆ ದಿನಾಂಕ : 06-05-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : ಶ್ರೀ.ಎ.ಎಸ್.ಎಸ್ ವಕೀಲರಿಂದ ಪಿರ್ಯಾದಿದಾರರ ಪರವಾಗಿ</u>**

1. ನಾನು ಕೂಲಿ ಕೆಲಸ ಮಾಡುತ್ತೇನೆ. ನಾನು ವ್ಯವಸಾಯ ಜಮೀನುಗಳಲ್ಲಿ ದುಡಿಯುವ ಕೆಲಸ ಮಾಡುತ್ತೇನೆ. ಆ ರೀತಿ ಕೂಲಿ ಕೆಲಸ ಮಾಡುತ್ತೀರಿ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ನಿವೇಶನಗಳನ್ನು ತೋರಿಸಿ ಮಾರಾಟ ಮಾಡುವ ಮಧ್ಯಸ್ಥಿಕೆಗಾರರ ಕೆಲಸ ಮಾಡುತ್ತೀರಿ ಎಂದರೆ ಸರಿಯಲ್ಲ. ನೀವು ಪ್ರಕರಣ ಅನುಕೂಲವಾಗುವಂತೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮಗೆ ಪಿರ್ಯಾದಿದಾರನ ಪರಿಚಯ ಕಳೆದ 6 ರಿಂದ 7 ವರ್ಷಗಳಿಂದ ಇದೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ನಿಡಿ-8 ಮತ್ತು ನಿಡಿ-9 ಛಾಯಾಚಿತ್ರಗಳನ್ನು ನೀವು ತೆಗೆದಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನಿಡಿ-8 ಮತ್ತು ನಿಡಿ-9 ಛಾಯಾಚಿತ್ರಗಳನ್ನು ನೀವು ಹಾಜರಪಡಿಸಿದ್ದೀರಾ ಎಂದರೆ ಹೌದು ಎಂದು ಸಾಕ್ಷಿ ಹೇಳುತ್ತಾರೆ. ಸದರಿ ಛಾಯಾಚಿತ್ರಗಳು ನಿಮ್ಮ ಕಡೆಗೆ ಹೇಗೆ ಬಂದವು ಎಂದರೆ ನಾನು ಸದರಿ ಛಾಯಾಚಿತ್ರ ತೆಗೆದು ಇಟ್ಟುಕೊಂಡಿದ್ದೆ ಎಂದು ಹೇಳುತ್ತಾರೆ. ನಿಡಿ-8 ಮತ್ತು ನಿಡಿ-9 ರಲ್ಲಿ ತೋರಿಸಿದ ಚೆಕ್ಕನ್ನು ನೀವೇ ಪಿರ್ಯಾದಿದಾರನಿಗೆ ನೀಡಿದ್ದೀರಿ ಎಂದರೆ ಸರಿ. ಸಾಕ್ಷಿಗೆ ಈಗ ನಿಡಿ-10 ನ್ನು ತೋರಿಸುತ್ತಿದ್ದು ಅದು ಪೂರ್ತಿಯಾಗಿ ತುಂಬಿಲ್ಲ ಎಂದರೆ ಸರಿ. ನೀವು ನಿಡಿ-10 ಛಾಯಾಚಿತ್ರದಲ್ಲಿ ತೋರಿಸಿದಂತೆ ನಿಮ್ಮ ಖಾತೆಯಲ್ಲಿ 9 ಲಕ್ಷ 50 ಸಾವಿರ ಇದೆ ಎಂದು ಸದರಿ ಮೊತ್ತವನ್ನು ತೆಗೆದುಕೊಳ್ಳಬೇಕು ಎಂದು ಪಿರ್ಯಾದಿದಾರನಿಗೆ ನೀಡಿದಿರಿ ಎಂದರೆ ಸರಿಯಲ್ಲ. ಪಿರ್ಯಾದಿದಾರ ತನಗೆ ನಿಮ್ಮಿಂದ 19 ಲಕ್ಷ 50 ಸಾವಿರ ರೂಪಾಯಿ ಬರುವುದಿದೆ ಎಂದು ಹೇಳಿದಾಗ ನೀವು ಅವರ ಬಳಿ ಬಂದು ಚೆಕ್ಕನ್ನು 19 ಲಕ್ಷ 50 ಸಾವಿರ ರೂಪಾಯಿಗೆ ಪೂರ್ತಿಯಾಗಿ ಬರೆದು ನೀಡಿದ್ದೀರಿ ಎಂದರೆ ಸರಿಯಲ್ಲ.

2. ಸಾಕ್ಷಿಗೆ ಈಗ ಈ ಪ್ರಕರಣದಲ್ಲಿ ಅವರು ಸಲ್ಲಿಸಿದ ವಕಾಲತ್ ತೋರಿಸುತ್ತಿದ್ದು, ಅದರ ಮೇಲಿನ ಸಹಿಯನ್ನು ಸಾಕ್ಷಿ ಗುರುತಿಸುತ್ತಾರೆ. ನಿಮಗೆ ಆಂಗ್ಲ ಭಾಷೆ ಓದಲು - ಬರೆಯಲು ಬರುತ್ತದೆ ಎಂದರೆ ಸರಿಯಲ್ಲ. ನಿಪಿ-1 ಚೆಕ ಮೇಲಿನ ಸಹಿ ಮತ್ತು ವಕಾಲತ್ ಮೇಲಿನ ಸಹಿ ಎರಡೂ ನಿಮ್ಮವೇ ಎಂದರೆ ಚೆಕ ಮೇಲಿನ ಸಹಿ ನನ್ನದಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನೀವು ನಿಡಿ-8 ರಿಂದ ನಿಡಿ-10 ರ ಛಾಯಾಚಿತ್ರಗಳಂತೆ ಚೆಕ ಮೇಲೆ ಸಹಿ ಮಾಡಿ ನೀಡಿದ್ದೀರಿ ಎಂದರೆ ಸರಿಯಲ್ಲ. ಚೆಕ ಮೇಲಿನ ಸಹಿ ನಿಮ್ಮದಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಗೆ ಸಮಯಾವಕಾಶ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ